ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 27/02/2020

### ಬಾಡಿಗೆ ತಾಯಿಯಾಗಲು ಕುಟುಂಬವೊಂದರ ಹತ್ತಿರದ ಸಂಬಂಧಿಯೇ ಆಗಿರಬೇಕಾಗಿಲ್ಲ

# ಬಾಡಿಗೆ ತಾಯ್ತನ ವಿಧೇಯಕ

**ದಿಲ್ಲಿ:** ರಾಜ್ಯಸಭೆಯ ಪ್ರಮುಖ ಶಿಫಾರಸುಗಳ ಸೇರ್ಪಡೆಯೊಂದಿಗೆ ಸಿದ್ಧಗೊಂಡಿರುವ ಬಾಡಿಗೆ ತಾಯ್ತನ ನಿಯಂತ್ರಣ ವಿಧೇಯಕ-2020ಕ್ಕೆ ಕೇಂದ್ರ ಸಚಿವ ಸಂಪುಟದ ಅಸ್ತು ಮುದ್ರೆ ಬಿದ್ದಿದೆ. ಬಾಡಿಗೆ ತಾಯಿಯಾಗಲು ಕುಟುಂಬವೊಂದರ ಹತ್ತಿರದ ಸಂಬಂಧಿಯೇ ಆಗಿರಬೇಕಾಗಿಲ್ಲ, ಬಾಡಿಗೆ ತಾಯ್ತನದ ಪಾತ್ರ ವಹಿಸಲು ಇಚ್ಛಿಸುವ ಮಹಿಳೆಗೂ ಅವಕಾಶ ಸಿಗಬೇಕು ಎಂದು ರಾಜ್ಯಸಭೆಯ 23 ಸದಸ್ಯರ ಸಮಿತಿಯು ಸರಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸುಗಳೊಂದಿಗೆ ಪರಿಷ್ಕೃತಗೊಂಡಿರುವ ಬಾಡಿಗೆ ತಾಯ್ತನ ನಿಯಂತ್ರಣ ವಿಧೇಯಕಕ್ಕೆ ಈಗ ಕ್ಯಾಬಿನೆಟ್ ಒಪ್ಪಿಗೆ ಸೂಚಿಸಿದೆ.

ವಾಣಿಜ್ಯ ಉದ್ದೇಶಕ್ಕೆ ಬಾಡಿಗೆ ತಾಯ್ತನ ದುರ್ಬಳಕೆಯಾಗುವುದಕ್ಕೂ ಇದು ಕಡಿವಾಣ ಹಾಕಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದರು. ಕಳೆದ ವರ್ಷ ಲೋಕಸಭೆಯ ಅನುಮೋದನೆ ಪಡೆದಿದ್ದ ಬಾಡಿಗೆ ತಾಯ್ತನ ನಿಯಂತ್ರಣ-2019 ವಿಧೇಯಕದಲ್ಲಿ ಬಾಡಿಗೆ ತಾಯಿ ಕುಟುಂಬವೊಂದರ ನಿಕಟ ಸಂಬಂಧಿಯೇ ಆಗಿರಬೇಕೆಂದು ನಿರ್ಬಂಧಿಸಲಾಗಿತ್ತು. ಇದು ಬಾಡಿಗೆ ತಾಯಂದಿರ ಲಭ್ಯತೆಯನ್ನು ಮಿತಿಗೊಳಿಸುತ್ತದೆ. ನಿಜವಾಗಿಯೂ ಮಗುವಿನ ಅವಶ್ಯಕತೆಯಲ್ಲಿರುವ ಅಪೇಕ್ಷಿತರ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಈ ನಿಬಂಧನೆ ತೆಗೆದುಹಾಕಬೇಕೆಂದು ರಾಜ್ಯಸಭೆಯ ಸದಸ್ಯರ ಸಮಿತಿ ಶಿಫಾರಸು ಮಾಡಿತ್ತು. ಈಗ ಪರಿಷ್ಕರಣೆಗೊಂದಿಗೆ ಸಚಿವ ಸಂಪುಟ ಅಂಗೀಕರಿಸಿದ ವಿಧೇಯಕವನ್ನು ಪುನಃ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿ ಒಪ್ಪಿಗೆ ಪಡೆಯಬೇಕಾಗುತ್ತದೆ.



ಹಲವು ಶಿಫಾರಸು: 35 ರಿಂದ 45 ವರ್ಷದೊಳಗಿನ ವಿಧವೆ ಅಥವಾ ವಿಚ್ಛೇದಿತ ಮಹಿಳೆಗೂ ಬಾಡಿಗೆ ತಾಯ್ತನ ಪಡೆಯಲು ಅವಕಾಶ ನೀಡಬೇಕೆಂಬ ಸಲಹೆಯನ್ನೂ ಸೇರಿಸಲಾಗಿದೆ. ಬಂಜೆತನ ಪದವನ್ನು ತೆಗೆದುಹಾಕಿ ಅದರ ಬದಲಿಗೆ ಅಸಮರ್ಥತೆ ಎಂಬ ಪದ ಸೇರಿಸಲು ಹಾಗೂ ಬಾಡಿಗೆ ತಾಯಿಗೆ ಉದ್ದೇಶಿತ ವಿಮಾ ರಕ್ಷಣೆಯನ್ನು 16 ತಿಂಗಳಿಂದ 36 ತಿಂಗಳಿಗೆ ವಿಸ್ತರಿಸಬೇಕೆಂಬ ಹಾಗೂ ದೇಶದಲ್ಲಿ ಭಾರತೀಯ ಮೂಲದ ಜೋಡಿಗಷ್ಟೆ ಈ ಬಾಡಿಗೆ ತಾಯ್ತನದ ಭಾಗ್ಯ ಪಡೆಯಲು ಅವಕಾಶ ನೀಡಬೇಕೆಂಬ ಶಿಫಾರಸುಗಳನ್ನೂ ಪರಿಷ್ಕೃತ ವಿಧೇಯಕ ಕರಡಿನಲ್ಲಿ ಸೇರಿಸಲಾಗಿದೆ.

## ಶೋಷಣೆಯಿಂದ ಬಾಡಿಗೆ ತಾಯಂದಿರ ರಕ್ಷಣೆ

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆ ವಹಿಸಿದ್ದ ಸಂಪುಟ ಸಭೆಯ ವಿವರಗಳ ಮಾಹಿತಿ ನೀಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, ಬಂಜೆತನ ಎದುರಿಸುತ್ತಿರುವ ದಂಪತಿ ಸಮಾಜದಲ್ಲಿ ಎದುರಿಸುತ್ತಿರುವ ಅವಮಾನಗಳನ್ನು ತಡೆಯಲು ಈ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಈ ಮಸೂದೆ ಬಾಡಿಗೆ ತಾಯಿ ಉದ್ಯಮವನ್ನು ನಿಯಂತ್ರಿಸಲು, ಮುಖ್ಯವಾಗಿ ಬಾಡಿಗೆ ತಾಯಂದಿರನ್ನು ಶೋಷಣೆಯಿಂದ ರಕ್ಷಿಸುವ ಗುರಿ ಹೊಂದಿದೆ ಎಂದು ವಿವರಿಸಿದರು.

ಸಂತಾನೋತ್ಪತ್ತಿಗೆ ನೆರವಾಗುವ ತಂತ್ರಜ್ಞಾನದ ನಿಯಂತ್ರಣ (ಎಆರ್‌ಟಿ ) ಮಸೂದೆ ಮತ್ತು ಬಾಡಿಗೆ ತಾಯಿ ಮಸೂದೆ ಸೇರಿದಂತೆ ಎರಡು ಮಹಿಳಾ ಪರ ಮಸೂದೆಗಳಿಗೆ ಸಂಪುಟದಲ್ಲಿ ಅನುಮೋದನೆ ದೊರೆತಿರುವುದು, ಒಬ್ಬಳು ಮಹಿಳೆಯಾಗಿ ನನಗೆ ತುಂಬಾ ಹೆಮ್ಮೆ ತಂದಿದೆ ಎಂದು ಸ್ಮೃತಿ ಇರಾನಿ ಹೇಳಿದರು.